# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 19/12/20

# ಪರಿಷತ್ ಕಾರ್ಯದರ್ಶಿಗೆ ಸಭಾಪತಿ ನೋಟಿಸ್ ಜಾರಿ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ನಡೆದ ಘರ್ಷಣೆ ಸಂಬಂಧ ಮೇಲ್ಮನೆ ಕಾರ್ಯದರ್ಶಿಗೆ ಸಭಾಪತಿ ಕೆ.ಪ್ರತಾಪಶೆಟ್ಟಿ ನೋಟೀಸ್ ಜಾರಿ ಮಾಡಿದ್ದಾರೆ.

ವಿಧಾನ ಪರಿಷತ್ ಸಭಾಪತಿ ಪೀಠಕ್ಕಾಗಿ ನಡೆದ ಘರ್ಷಣೆ ವೇಳೆ ನನಗೆ ಸರಿಯಾಗಿ ಮಾಹಿತಿ ನೀಡದೆ ನಿರ್ಲಕ್ಷ್ಯ ಮಾಡಿದ್ದೀರಿ. ಕೋರಂ ಬೆಲ್ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ನಿಯಮ ಬಾಹಿರವಾಗಿ ಉಪ ಸಭಾಪತಿ ಪೀಠ ಅಲಂಕರಿಸಿರುವುದು ಹೇಗೆ? ಸಭಾಪತಿಗಳು ಪ್ರವೇಶ ಮಾಡುವ ದ್ವಾರದ ಬಾಗಿಲು ಮುಚ್ಚಿ ನನ್ನ ಪ್ರವೇಶಕ್ಕೆ



ನಿರ್ಬಂಧಿಸಿರುವುದು ಯಾಕೆ? ಎನ್ನುವ ಮಾಹಿತಿ ನೀಡಬೇಕು. ಉಪ ಸಭಾಪತಿ ಅವರಿಗೆ ಪೀಠದಲ್ಲಿದ್ದ ಸಂದರ್ಭದಲ್ಲಿ ಸರಿಯಾಗಿ ಮಾಹಿತಿ ನೀಡದೆ ಸದನ ಮುಂದುವರಿಸುವ ಚಿತಾವಣೆ ರೀತ್ಯಾ ದಾಖಲೆಗಳನ್ನು ಒದಗಿಸಿರುವುದು ಸೇರಿ ತಮ್ಮ ಕರ್ತವ್ಯ ನಿರ್ಲಕ್ಷ್ಯತನಕ್ಕೆ ಸಾಕ್ಷಿಯಾಗಿರುವ ಹಲವು ಅಂಶಗಳನ್ನು ನಾನು ಗಮನಿಸಿದ್ದೇನೆ ಎಂದು ನೋಟಿಸ್‌ನಲ್ಲಿ ಲೋಪಗಳನ್ನು ಪಟ್ಟಿ ಮಾಡಿದ್ದಾರೆ.

**ಪ್ರತಿಕ್ರಿಯೆ ನೀಡದ ಕಾರ್ಯದರ್ಶಿ:** ಸಭಾಪತಿ ನೋಟೀಸ್ ಜಾರಿ ಮಾಡಿರುವುದಕ್ಕೆ ಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮಿ ಅವರು ಇನ್ನೂ ಯಾವ ಪ್ರತಿಕ್ರಿಯೆ ನೀಡಿಲ್ಲ. ಕಾರ್ಯದರ್ಶಿ ಅವರಿಗೆ ನೋಟಿಸ್ ಇನ್ನೂ ತಲುಪಿಲ್ಲ ಎನ್ನಲಾಗಿದೆ. ಸಭಾಪತಿ ಬರುವ ಬಾಗಿಲನ್ನು ಬಂದ್ ಮಾಡಿರುವುದು ಯಾಕೆ? ಸಭಾಪತಿ ಗಮನಕ್ಕೆ ಇಲ್ಲದೆ ಈ ಘಟನಾವಳಿಗಳು ನಡೆದಿರುವುದು ಹೇಗೆ? ಎನ್ನುವ ಅಂಶಗಳನ್ನು ಮುಂದಿಟ್ಟುಕೊಂಡು ಮಾರ್ಷಲ್‌ಗೂ ಶೀಘ್ರವೇ ನೋಟೀಸ್ ಜಾರಿ ಮಾಡಲಿದ್ದಾರೆ ಎಂದು ತಿಳಿದುಬಂದಿದೆ.